**Akashvani : Bangalore**
**National News In Kannada**
**21.11.2025 : 13.10hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**21.11.2025 : 13.10hrs**
******

**ಮುಖ್ಯಾಂಶಗಳು:**

1. ಭಾರತದ ವಸುಧೈವ ಕುಟುಂಬಕಂ ದೃಷ್ಟಿಕೋನವನ್ನು ಜಿ-೨೦ ಶೃಂಗಸಭೆಯಲ್ಲಿ ಪ್ರಸ್ತುತಪಡಿಸಲಾಗುವುದು- ಪ್ರಧಾನಿ ನರೇಂದ್ರ ಮೋದಿ
2. ಮೂಲಸೌಕರ್ಯ, ಇಂಧನ ವಲಯದ ಪಾಲುದಾರರೊಂದಿಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಪೂರ್ವ ಸಮಾಲೋಚನೆ
3. ಇಫೀ ಚಲನಚಿತ್ರೋತ್ಸವ; ರಾಯಭಾರಿಗಳ
4. ದುಂಡು ಮೇಜಿನ ಸಭೆಯಲ್ಲಿ ಕೇಂದ್ರ ಸಚಿವ ಡಾ.ಎಲ್.ಮುರುಗನ್ ಭಾಗಿ
5. ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್; ಸೆಮಿ ಫೈನಲ್ ಪ್ರವೇಶಿಸಿದ ಭಾರತದ ಲಕ್ಷ್ಯ ಸೇನ್

*********

೨೦ನೇ ಜಿ-೨೦ ನಾಯಕರ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಇದೇ ೨೩ರವರೆಗೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ಗೆ ಪ್ರವಾಸ ಕೈಗೊಂಡಿದ್ದಾರೆ. ೨೦೧೬ ರಲ್ಲಿ ದ್ವಿಪಕ್ಷೀಯ ಭೇಟಿ ಹಾಗೂ ನಂತರ ೨೦೧೮ ಮತ್ತು ೨೦೨೩ ರಲ್ಲಿ ನಡೆದ ಎರಡು ಬ್ರಿಕ್ಸ್ ಶೃಂಗಸಭೆಗಳಿಗೆ ಭೇಟಿ ನೀಡಿದ ಬಳಿಕ, ದಕ್ಷಿಣ ಆಫ್ರಿಕಾಕ್ಕೆ ಪ್ರಧಾನಿ ನೀಡುತ್ತಿರುವ ನಾಲ್ಕನೇ ಅಧಿಕೃತ ಭೇಟಿ ಇದಾಗಲಿದೆ. ಶೃಂಗಸಭೆಯಲ್ಲಿ, ಜಿ-೨೦ ಕಾರ್ಯಸೂಚಿಯ ಕುರಿತು ಭಾರತದ ದೃಷ್ಟಿಕೋನಗಳನ್ನು ಪ್ರಧಾನಿ ಮಂಡಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಶೃಂಗಸಭೆಯ ಮೂರು ಅಧಿವೇಶನಗಳಲ್ಲಿಯೂ ಪ್ರಧಾನಿ ಮಾತನಾಡುವ ನಿರೀಕ್ಷೆಯಿದೆ. ಜಿ-೨೦ ನಾಯಕರ ಶೃಂಗಸಭೆಯ ಸಂದರ್ಭದಲ್ಲಿ ಉಪಸ್ಥಿತರಿರುವ ಕೆಲವು ನಾಯಕರೊಂದಿಗೆ ಪ್ರಧಾನಿ ಅವರು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ಇದರ ಜೊತೆಗೆ ದಕ್ಷಿಣ ಆಫ್ರಿಕಾ ಆಯೋಜಿಸುತ್ತಿರುವ ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ ನಾಯಕರ ಸಭೆಯಲ್ಲಿಯೂ ಅವರು ಭಾಗವಹಿಸಲಿದ್ದಾರೆ. ಇದು ಜಾಗತಿಕ ದಕ್ಷಿಣದಲ್ಲಿ ನಡೆಯುತ್ತಿರುವ ಸತತ ನಾಲ್ಕನೇ ಜಿ-೨೦ ಶೃಂಗಸಭೆಯಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ದಕ್ಷಿಣ ಆಫ್ರಿಕಾಕ್ಕೆ ಭಾರತದ ಹೈಕಮಿಷನರ್ ಪ್ರಭಾತ್ ಕುಮಾರ್, ಪ್ರಧಾನಿಯವರ ಭೇಟಿಯು ಜಿ-೨೦ ಶೃಂಗಸಭೆಗೆ ಮಾತ್ರವಲ್ಲದೆ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಒಂದು ಮಹತ್ವದ ಅವಕಾಶವಾಗಿದೆ ಎಂದು ಹೇಳಿದ್ದಾರೆ.

*********

೨೦ನೇ ಜಿ-೨೦ ನಾಯಕರ ಶೃಂಗಸಭೆಯು ಪ್ರಮುಖ ಜಾಗತಿಕ ಸಮಸ್ಯೆಗಳನ್ನು ಚರ್ಚಿಸಲು ಒಂದು ಅವಕಾಶವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಜೋಹಾನ್ಸ್‌ಬರ್ಗ್‌ಗೆ ಭೇಟಿ ನೀಡುವ ಮುನ್ನ ತಮ್ಮ ನಿರ್ಗಮನ ಹೇಳಿಕೆಯಲ್ಲಿ ಪ್ರಧಾನಿ, ವಸುಧೈವ ಕುಟುಂಬಕಂ ಮತ್ತು ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ ಎಂಬ ರಾಷ್ಟ್ರದ ದೃಷ್ಟಿಕೋನಕ್ಕೆ ಅನುಗುಣವಾಗಿ ಭಾರತದ ದೃಷ್ಟಿಕೋನವನ್ನು ಶೃಂಗಸಭೆಯಲ್ಲಿ ಪ್ರಸ್ತುತಪಡಿಸುವುದಾಗಿ ಹೇಳಿದರು. ಇದು ಆಫ್ರಿಕಾದಲ್ಲಿ

ನಡೆಯಲಿರುವ ಮೊದಲ ಜಿ-೨೦ ಶೃಂಗಸಭೆಯಾಗಲಿದೆ. ೨೦೨೩ ರಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಆಫ್ರಿಕನ್ ಒಕ್ಕೂಟವು ಜಿ-೨೦ ಸದಸ್ಯತ್ವವನ್ನು ಪಡೆದುಕೊಂಡಿತು. ಜಿ-೨೦ ಒಗ್ಗಟ್ಟು, ಸಮಾನತೆ ಮತ್ತು ಸುಸ್ಥಿರತೆ ಎಂಬ ಈ ವರ್ಷದ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ದಕ್ಷಿಣ ಆಫ್ರಿಕಾ, ನವದೆಹಲಿ ಮತ್ತು ರಿಯೊಡಿ ಜನ್ಯೆರೊನಲ್ಲಿ ನಡೆದ ಹಿಂದಿನ ಶೃಂಗಸಭೆಗಳ ಫಲಿತಾಂಶಗಳನ್ನು ಮುಂದಕ್ಕೆ ಕೊಂಡೊಯ್ದಿದೆ ಎಂದರು.

*********

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನವದೆಹಲಿಯಲ್ಲಿಂದು ಮೂಲಸೌಕರ್ಯ ಮತ್ತು ಇಂಧನ ವಲಯಗಳ ತಜ್ಞರೊಂದಿಗೆ ೧೧ ನೇ ಬಜೆಟ್ ಪೂರ್ವ ಸಮಾಲೋಚನೆಯ ಅಧ್ಯಕ್ಷತೆ ವಹಿಸಿದ್ದರು. ಮುಂಬರುವ ೨೦೨೬-೨೭ರ ಕೇಂದ್ರ ಬಜೆಟ್‌ಗೆ ಸಂಬಂಧಿಸಿದಂತೆ ಈ ಸಭೆ ನಡೆಯಿತು. ಇದರಲ್ಲಿ ವಿದ್ಯುತ್ ಸಚಿವಾಲಯ, ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿಗಳು, ರೈಲ್ವೆ ಮಂಡಳಿಯ ಅಧ್ಯಕ್ಷರು ಮತ್ತು ಭಾರತ ಸರ್ಕಾರದ ಪ್ರಧಾನ ಆರ್ಥಿಕ ಸಲಹೆಗಾರರು ಭಾಗವಹಿಸಿದ್ದರು.ವಿತ್ತ ಸಚಿವರು ನಿನ್ನೆ ಕಾರ್ಮಿಕ ಸಂಘಗಳು, ಕಾರ್ಮಿಕ ಸಂಘಟನೆಗಳು, ಪ್ರವಾಸೋದ್ಯಮ ಮತ್ತು ಆತಿಥ್ಯ ವಲಯದ ಪ್ರತಿನಿಧಿಗಳೊಂದಿಗೆ ಬಜೆಟ್ ಪೂರ್ವ ಸಮಾಲೋಚನಾ ಸಭೆ ನಡೆಸಿದರು.

*********

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದು ತಿರುಮಲದಲ್ಲಿರುವ ವೆಂಕಟೇಶ್ವರ ಸ್ವಾಮಿಯ ಪವಿತ್ರ ಬೆಟ್ಟ ದೇಗುಲಕ್ಕೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು. ಮೊದಲಿಗೆ ರಾಷ್ಟ್ರಪತಿ ತಿರುಮಲದ ಕ್ಷೇತ್ರಪಾಲಕ ವರಾಹ ಸ್ವಾಮಿ ದೇಗುಲಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ಮಹಾದ್ವಾರದಲ್ಲಿ ಟಿಟಿಡಿ ಅಧ್ಯಕ್ಷ ಬಿ.ಆರ್.ನಾಯ್ಡು, ವೇದ ವಿಧ್ವಾಂಸರು ಮತ್ತು ದೇವಾಲಯದ ಹಿರಿಯ ಅಧಿಕಾರಿಗಳು ರಾಷ್ಟ್ರಪತಿಗಳಿಗೆ ಸ್ವಾಗತ ಕೋರಿದರು.

*********

ಇಂದು ವಿಶ್ವ ಟೆಲಿವಿಷನ್ ದಿನ. ಸಾರ್ವಜನಿಕ ಅಭಿಪ್ರಾಯವನ್ನು ತಿಳಿಸುವುದು, ಶಿಕ್ಷಣ ನೀಡುವುದು ಹಾಗೂ ಸಂವಹನ ಮತ್ತು ಜಾಗತಿಕ ತಿಳುವಳಿಕೆಯನ್ನು ಬೆಳೆಸುವಲ್ಲಿ ಟಿವಿ ಮಾಧ್ಯಮ ಪ್ರಮುಖವಾಗಿದೆ. ೧೯೯೬ ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ೧೯೯೬ ರಲ್ಲಿ ಅಂಗೀಕರಿಸಿದ ಘೋಷಣೆಯ ನಂತರ ನವೆಂಬರ್ ೨೧ ರಂದು ಜಾಗತಿಕವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಭಾರತದ ಟೆಲಿವಿಷನ್ ಜಾಲವು ರಾಷ್ಟ್ರವ್ಯಾಪಿ ೨೩ ಕೋಟಿ ಮನೆಗಳಲ್ಲಿ ೯೦ ಕೋಟಿ ವೀಕ್ಷಕರನ್ನು ಸಂಪರ್ಕಿಸುತ್ತದೆ. ಈ ವರ್ಷದ ಮಾರ್ಚ್ ವೇಳೆಗೆ ೯೧೮ ಖಾಸಗಿ ಉಪಗ್ರಹ ವಾಹಿನಿಗಳು ಕಾರ್ಯನಿರ್ವಹಿಸುತ್ತಿವೆ. ದೂರದರ್ಶನ ಮತ್ತು ಆಕಾಶವಾಣಿಯ ಚಟುವಟಿಕೆಗಳು ಮತ್ತು ಸಂಪರ್ಕ ಕಾರ್ಯಕ್ರಮಗಳು ಸಾರ್ವಜನಿಕ ಸೇವಾ ಸಂವಹನ, ಅಭಿವೃದ್ಧಿ ಸಂದೇಶಗಳ ಪ್ರಸಾರ ಮತ್ತು ರಾಷ್ಟ್ರೀಯ ಏಕೀಕರಣದ ಪ್ರಚಾರದಲ್ಲಿ ಟಿವಿ ಮಾಧ್ಯಮದ ಶಾಶ್ವತ ಪಾತ್ರವನ್ನು ಎತ್ತಿ ತೋರಿಸುತ್ತವೆ. ಭಾರತದಲ್ಲಿ ಟೆಲಿವಿಷನ್ ಪ್ರಸಾರವು ೧೯೫೯ ರ ಸೆಪ್ಟೆಂಬರ್ ೧೫, ರಂದು ಆಕಾಶವಾಣಿಯಿಂದ ಪ್ರಾರಂಭಿಸಲ್ಪಟ್ಟ ಪ್ರಾಯೋಗಿಕ ಆಧಾರದ ಮೇಲೆ ಪ್ರಾರಂಭವಾಯಿತು. ನಂತರ, ೧೯೬೫ ರಲ್ಲಿ ನಿಯಮಿತ ದೈನಂದಿನ ಪ್ರಸಾರವು ಪ್ರಾರಂಭವಾಯಿತು, ಇದು ಆಕಾಶವಾಣಿಯಲ್ಲಿ ದೃಶ್ಯ ಪ್ರಸಾರ ಸೇವೆಯಾಗಿ ದೂರದರ್ಶನದ ಸ್ಥಾಪನೆಯನ್ನು ಗುರುತಿಸಿತು. ಭಾರತದ ಮಾಧ್ಯಮ ಮತ್ತು ಮನರಂಜನಾ ವಲಯವು ೨೦೨೪ ರಲ್ಲಿ ಆರ್ಥಿಕತೆಗೆ ೨.೫ ಟ್ರಿಲಿಯನ್ ರೂಪಾಯಿ ಕೊಡುಗೆ ನೀಡಿದೆ ಮತ್ತು ೨೦೨೭ ರ ವೇಳೆಗೆ ಮೂರು ಟ್ರಿಲಿಯನ್ ರೂಪಾಯಿ ಮೀರುವ ನಿರೀಕ್ಷೆಯಿದೆ.

*********

೫೬ ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ- ಐಎಫ್‌ಎಫ್‌ಐ ೨೦೨೫ ಎರಡನೇ ದಿನಕ್ಕೆ ಕಾಲಿಟ್ಟಿದೆ. ಬಹುನಿರೀಕ್ಷಿತ ಮಾಸ್ಟರ್‌ಕ್ಲಾಸ್‌ಗಳನ್ನು ಇಂದು ಪಣಜಿಯ ಕಲಾ ಅಕಾಡೆಮಿಯಲ್ಲಿ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್ ಮುರುಗನ್ ಮತ್ತು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ಚಲನಚಿತ್ರ ನಿರ್ಮಾಪಕ ಮುಜಾಫರ್ ಅಲಿ ಕೂಡ ಭಾಗವಹಿಸಿದ್ದರು. ಅವರು ಮೊದಲ ಮಾಸ್ಟರ್ ಕ್ಲಾಸ್ ತೆಗೆದುಕೊಳ್ಳಲಿದ್ದಾರೆ. ಅವರ ಗಮನ್ ಮತ್ತು ಉಮ್ರಾವ್ ಜಾನ್ ಚಲನಚಿತ್ರಗಳನ್ನು ಸಹ ಉತ್ಸವದಲ್ಲಿ ಪ್ರದರ್ಶಿಸಲಾಗುತ್ತಿದೆ.

*********

ಗೋವಾದಲ್ಲಿ ನಡೆಯುತ್ತಿರುವ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಭಾಗವಾಗಿ ನಡೆದ ಚಲಚಿತ್ರ ಮತ್ತು ಡಿಜಿಟಲ್ ವಿಷಯ ಸಹ ನಿರ್ಮಾಣದ ಕುರಿತ ರಾಯಭಾರಿಗಳ ದುಂಡು ಮೇಜಿನ ಸಭೆಯನ್ನು ಕೇಂದ್ರ ಸಚಿವ ಡಾ.ಎಲ್.ಮುರುಗನ್ ನಡೆಸಿಕೊಟ್ಟರು. ಈ ವೇಳೆ ಅವರು, ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು, ಪೈರಸಿ ವಿರೋಧಿ ಕ್ರಮಗಳನ್ನು ಬಲಪಡಿಸುವುದು, ಅಂತಾರಾಷ್ಟ್ರೀಯ ಚಲನಚಿತ್ರ ಸಹಯೋಗ ಮತ್ತು ಸಹ ನಿರ್ಮಾಣ ಅವಕಾಶಗಳನ್ನು ವಿಸ್ತರಿಸುವುದು ಹಾಗೂ ಚಲನಚಿತ್ರೋತ್ಸವಗಳಲ್ಲಿ ಭಾರತೀಯ ಚಿತ್ರರಂಗವನ್ನು ಉತ್ತೇಜಿಸುವ ಬಗ್ಗೆ ಚರ್ಚೆ ನಡೆಯಿತು.

*********

ಬ್ರೆಜಿಲ್‌ನ ಬೆಲೆಮ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆ ಕಾಪ್-೩೦ ಹವಾಮಾನ ಶೃಂಗಸಭೆಯ ವೇಳೆ ನಿನ್ನೆ ಅಗ್ನಿ- ಅವಘಡ ಸಂಭವಿಸಿದ್ದು, ೨೧ ಜನರು ಗಾಯಗೊಂಡಿದ್ದಾರೆ. ಸಭೆ ನಡೆಯುತ್ತಿದ್ದ ಬ್ಲೂ ಝೋನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳು ಉನ್ನತ ನಾಯಕರು ಹಾಗೂ ಸಭೆಯಲ್ಲಿ ಚರ್ಚಿಸಲು ಬಂದಿದ್ದ ವಿವಿಧ ದೇಶಗಳ ಪ್ರತಿನಿಧಿಗಳಿದ್ದರು. ೨೧ ಜನರಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗಿದೆ. ಎಲ್ಲರಿಗೂ ಸೂಕ್ತವಾಗಿ ಉಪಚರಿಸಲಾಗಿದ್ದು, ೧೨ ಜನರನ್ನು ಈಗಾಗಲೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ. ಯಾರಿಗೂ ಅವಘಡದಲ್ಲಿ ಸುಟ್ಟು ಗಾಯಗಳಾಗಿಲ್ಲ ಎಂದು ಬ್ರೆಜಿಲ್ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಈ ಶೃಂಗಸಭೆಯಲ್ಲಿ ವಿಶ್ವ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೊನಿಯೋ ಗುಟೆರಸ್ ಭಾಗವಸಿದ್ದರು. ಭಾರತವನ್ನು ಪ್ರತಿನಿಧಿಸಿ ಕೇಂದ್ರ ಸಚಿವ ಭೋಪೇಂದ್ರ ಯಾದವ್ ಮತ್ತು ಅವರ ನೇತೃತ್ವದ ಭಾರತೀಯ ನಿಯೋಗವು ಅಗ್ನಿ ಅವಘಡ ಸ್ಥಳದಲ್ಲಿತ್ತು. ಎಲ್ಲರೂ ಸುರಕ್ಷಿತವಾಗಿ ಸ್ಥಳಾಂತರಗೊಂಡಿದ್ದಾರೆ.

*********

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಆರಂಭವಾದಗಿನಿಂದ ಸಾವಿರಾರು ಅಕ್ರಮ ಬಾಂಗ್ಲಾದೇಶಿ ವಲಸಿಗರು ಪಶ್ಚಿಮ ಬಂಗಾಳದ ವಿವಿಧ ಗಡಿ ಚೆಕ್‌ಪೋಸ್ಟ್‌ಗಳ ಮೂಲಕ ಭಾರತದಿಂದ ಹೊರ ಹೋಗುತ್ತಿದ್ದಾರೆ. ಅಗತ್ಯ ದಾಖಲಾತಿ ಪ್ರಕ್ರಿಯೆಗಳನ್ನು ಮುಗಿಸಿದ ಬಳಿಕ ಅವರನ್ನು ಗಡಿ ಭದ್ರತಾಪಡೆ, ಬಾಂಗ್ಲಾದೇಶದ ಗಡಿ ಭದ್ರತಾ ಪಡೆಗೆ ಹಸ್ತಾಂತರಿಸುತ್ತಿವೆ. ಕೆಲವು ಅಕ್ರಮ ವಲಸಿಗರು ಹತ್ತು ವರ್ಷಗಳಿಗೂ ಹೆಚ್ಚಿನ ಸಮಯದಿಂದ ಭಾರತದಲ್ಲಿದ್ದುಕೊಂಡು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಹಲವಾರು ಸರ್ಕಾರಿ ಕಲ್ಯಾಣ ಯೋಜನೆಗಳಡಿ ನೋಂದಾಯಿಸಿಕೊಂಡಿದ್ದರು. ಎಸ್‌ಐಆರ್ ಪ್ರಾರಂಭವಾದಾಗಿನಿಂದ ಈವರೆಗೆ ಸುಮಾರು ಒಂದು ಸಾವಿರದ ೬೦೦ ಬಾಂಗ್ಲಾದೇಶಿ ಪ್ರಜೆಗಳು ತಮ್ಮ ದೇಶಕ್ಕೆ ಮರಳಿದ್ದಾರೆ ಎಂದು ಹಕೀಂಪುರ ಚೆಕ್‌ಪೋಸ್ಟ್‌ನಲ್ಲಿರುವ ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

*********

ಅಕ್ರಮ ಕಲ್ಲಿದ್ದಲು ಗಣಿಗಾರಿಕೆ ಪ್ರಕರಣದಲ್ಲಿ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ೪೦ಕ್ಕೂ ಹೆಚ್ಚು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ- ಇಡಿ ದಾಳಿ ನಡೆಸಿದೆ.ಅಕ್ರಮ ಕಲ್ಲಿದ್ದಲು ಸಾಗಣೆ ವಿರುದ್ಧ ನೂರಕ್ಕೂ ಹೆಚ್ಚು ಇಡಿ ಅಧಿಕಾರಿಗಳು ಮತ್ತು ಸಿಬ್ಬಂದಿ ದಾಳಿ ನಡೆಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. ಇಂದು ಬೆಳಗ್ಗೆ ಆರು ಗಂಟೆಗೆ ಶೋಧ ಕಾರ್ಯಾಚರಣೆ ಆರಂಭವಾಯಿತು. ಅಕ್ರಮ ಕಲ್ಲಿದ್ದಲು ಗಣಿಗಾರಿಕೆ, ಸಾಗಣೆ ಮತ್ತು ಸಂಗ್ರಹಣೆ ಪ್ರಕರಣದಲ್ಲಿ ಇಡಿ ಕೊಲ್ಕತ್ತಾದ ದುರ್ಗಾಪುರ್ ಪುರುಲಿಯಾ ಹೌರಾ ಮತ್ತು ಕೊಲ್ಕತ್ತಾ ಜಿಲ್ಲೆಗಳ ೨೪ ಸ್ಥಳಗಳಲ್ಲಿ ಹಾಗೂ ಜಾರ್ಖಂಡ್‌ನ ೧೮ ಸ್ಥಳಗಳಲ್ಲಿ ಇಡಿ ಶೋಧ ಕಾರ್ಯಾಚರಣೆ ನಡೆಸಿದೆ.

*********

ಆಸ್ಟ್ರೇಲಿಯದಲ್ಲಿ ನಡೆದ ಬ್ಯಾಡ್ಮಿಂಟನ್ ಓಪನ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಲಕ್ಷ್ಯ ಸೇನ್, ಭಾರತದವರೇ ಆದ ಆಯುಷ್ ಶೆಟ್ಟಿ ಅವರನ್ನು ೨೩-೨೧, ೨೧-೧೧ ಅಂತರದಿಂದ ಸೋಲಿಸುವ ಮೂಲಕ ಸೆಮಿಫೈನಲ್ ತಲುಪಿದರು. ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಇಂದು ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಶೋಹಿಬುಲ್ ಫಿಕ್ರಿ ಜೋಡಿ ವಿರುದ್ಧ ಪರಾಭವಗೊಂಡಿದ್ದಾರೆ. ಮತ್ತೊಂದೆಡೆ, ಎಚ್‌ಎಸ್ ಪ್ರಣಯ್ ಮತ್ತು ಕಿಡಂಬಿ ಶ್ರೀಕಾಂತ್ ನಿನ್ನೆ ಪಂದ್ಯಾವಳಿಯಿಂದ ನಿರ್ಗಮಿಸಿದರು.

*****END****